ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)

**ಸಹಕಾರ ಸಂಘಗಳ ನಿಬಂಧಕರು ಹಾಗೂ ಚೀಟಿ ಪ್ರಬಂಧಕರ ಕಛೇರಿ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52.**

ಸಂಖ್ಯೆ: RCS/NML/NML1/6/2025-MLPB ದಿನಾಂಕ:20-01-2025

ವಿಷಯ: ಹಿಶಿತಾ ಅಂಡ್ ಗಜನ್ ಚಿಟ್ ಫಂಡ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು-560055. ಇವರಿಗೆ ಚೀಟಿ ವ್ಯವಹಾರ ನಡೆಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಚೀಟಿ ನಿಧಿಗಳ ಉಪ ನಿಬಂಧಕರು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ. ಇವರ ಪತ್ರ ಸಂಖ್ಯೆ. ಡಿಆರ್ ಬಿ-4/ಸಿಎಫ್ ಎಸ್/157/2024-25 ದಿನಾಂಕ.07-01-2025

*******

**ಪ್ರಸ್ತಾವನೆ:**

ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಚೀಟಿ ನಿಧಿಗಳ ಉಪ ನಿಬಂಧಕರು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ. ಇವರು ಸ್ಥಳ ಪರಿಶೀಲನೆ ನಡೆಸಿ, ಹಿಶಿತಾ ಅಂಡ್ ಗಜನ್ ಚಿಟ್ ಫಂಡ್ಸ್ ಪ್ರೈವೇಟ್ ಲಿಮಿಟೆಡ್., ನಂ. 79, 2ನೇ ಮಹಡಿ, 18ನೇ ಕ್ರಾಸ್, ವೆಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055. ಈ ಸಂಸ್ಥೆಗೆ ಚೀಟಿ ವ್ಯವಹಾರ ನಡೆಸಲು ಚೀಟಿ ನಿಧಿ ಅಧಿನಿಯಮ 1982 ರ ಪ್ರಕರಣ 19(1) ರಡಿ ಅನುಮತಿ ಕೋರಿ ಉಲ್ಲೇಖಿತ ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡಿರುತ್ತಾರೆ. ಚೀಟಿ ಸಂಸ್ಥೆಯು ಸಲ್ಲಿಸಿರುವ ದಾಖಲಾತಿಗಳ ವಿವರಗಳು ಕೆಳಕಂಡಂತಿದೆ.

| | | | | |
|---|---|---|---|---|
| 1 | ಹೆಸರು ಮತ್ತು ವಿಳಾಸ | | ಹಿಶಿತಾ ಅಂಡ್ ಗಜನ್ ಚಿಟ್ ಫಂಡ್ಸ್ ಪ್ರೈವೇಟ್ ಲಿಮಿಟೆಡ್., ನಂ. 79, 2ನೇ ಮಹಡಿ, 18ನೇ ಕ್ರಾಸ್, ವೆಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055. | |
| 2 | ಕಂಪೆನಿ ನೋಂದಣಿ ವಿವರ | | ಭಾರತೀಯ ಕಂಪನಿ ಕಾಯ್ದೆ 2013ರ ರೀತ್ಯಾ ದಿನಾಂಕ: 13-11-2024 ರಂದು ನೋಂದಣಿಯಾಗಿರುತ್ತದೆ. ನೋಂದಣಿ ಸಂಖ್ಯೆ: U66990KA2024PTC194819 (ಕಂಪನಿ ನೋಂದಣಿ ಪ್ರಮಾಣ ಪತ್ರದ ಪ್ರತಿ ಲಗತ್ತಿಸಿದೆ) | |
| 3 | PAN ಸಂಖ್ಯೆ | | AAHCH6127M | |
| 4 | TAN ಸಂಖ್ಯೆ | | BLRH17146D | |
| 5 | GST ಸಂಖ್ಯೆ | | - | |
| 6 | ಸಂಸ್ಥೆಯ ಬಾಡಿಗೆ ಕರಾರು | | ಚೀಟ್ ಸಂಸ್ಥೆಯ ಬಾಡಿಗೆ ಕರಾರು ಪತ್ರದ ಪ್ರತಿ ಲಗತ್ತಿಸಿದೆ | |
| 7 | ನಿರ್ದೇಶಕರು/ ಪದಾಧಿಕಾರಿಗಳ ವಿವರ: | | | |
| 8 | ಸಂ | ಹೆಸರು | ಹುದ್ದೆ | ವಿಳಾಸ |
| | 1 | ಶ್ರೀ ಅನಿಲ್ ಕುಮಾರ್. ಡಿ.ಬಿ ಆಧಾರ್ ನಂ. 8824 0429 6863 | ನಿರ್ದೇಶಕರು ಹಾಗೂ ಫೋರ್‌ಮನ್ | ಬಿನ್. ಬಸವೇಗೌಡ, ನಂ.59-G01, ಬಂದಿಗೌಡ ಹೌಸ್, 10ನೇ ಮುಖ್ಯರಸ್ತೆ, 15ನೇ ಅಡ್ಡರಸ್ತೆ, ಎಂ.ಇ.ಎಸ್ |

| | | | | |
|---|---|---|---|---|
| | | | | ಕಾಲೇಜು ಹತ್ತಿರ, ಮಲ್ಲೇಶ್ವರಂ, ಬೆಂಗಳೂರು-560055. |
| | 2 | ಶ್ರೀಮತಿ ಮಧು. ಎಸ್ ಆಧಾರ್ ನಂ. 8720 2753 9976 | ನಿರ್ದೇಶಕರು | ಬಿನ್.ಶಂಕರ್ ಟಿ. ನಂ.59-G01, ಬಂದಿಗೌಡ ಹೌಸ್, 10ನೇ ಮುಖ್ಯರಸ್ತೆ, 15ನೇ ಅಡ್ಡರಸ್ತೆ, ಎಂ.ಇ.ಎಸ್ ಕಾಲೇಜು ಹತ್ತಿರ, ಮಲ್ಲೇಶ್ವರಂ, ಬೆಂಗಳೂರು-560055. |
| 9 | ಷೇರು ಬಂಡವಾಳ | | ರೂ.10.00 ಲಕ್ಷ | |
| 10 | ಚೀಟಿ ನಡೆಸಲು ಹೂಡಿರುವ ಬಂಡವಾಳ ಹಾಗು ಬ್ಯಾಂಕ್ ವಿವರ (ಬ್ಯಾಂಕ್ ತಖ್ತೆ ಪ್ರತಿ ಲಗತ್ತಿಸಿದೆ) | | ಆಕ್ಸಿಸ್ ಬ್ಯಾಂಕ್‌ಲಿ. ಮಾಗಡಿ ರಸ್ತೆ, ಶಾಖೆ, ಬೆಂಗಳೂರು ಇಲ್ಲಿ ಖಾತೆ ಸಂ: 924020074002433 ರಲ್ಲಿ ದಿನಾಂಕ: 23-12-2024 ಕ್ಕೆ ರೂ.5,00,000/-ಗಳ (ರೂಪಾಯಿಗಳು ಐದು ಲಕ್ಷ ಮಾತ್ರ) ಶುಲ್ಕ ಹೊಂದಿರುತ್ತದೆ. | |
| 11 | ಕ್ರಿಮಿನಲ್ ಪ್ರಕರಣಗಳ ಬಗ್ಗೆ ವಿವರ | | ಫೋರ್‌ಮನ್ ಹಾಗೂ ನಿರ್ದೇಶಕರ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣಗಳು ದಾಖಲಾಗಿಲ್ಲದಿರುವ ಬಗ್ಗೆ, ನೋಟರಿ ಪ್ರಮಾಣ ಪತ್ರ ಹಾಗೂ ಪೊಲೀಸ್ ಪರಿಶೀಲನಾ ಪ್ರಮಾಣ ಪತ್ರಗಳನ್ನು ಅನ್ನು ಸಲ್ಲಿಸಿರುತ್ತಾರೆ. | |
| 12 | ಚೀಟಿ ನಿಧಿ ಕಾಯ್ದೆ ಮತ್ತು ನಿಯಮಾನುಸಾರದಂತೆ ಚೀಟಿ ಸಂಸ್ಥೆಯ ವ್ಯವಹಾರ ನಿರ್ವಹಿಸುವ ಬಗ್ಗೆ ಪ್ರಮಾಣ ಪತ್ರ (ಅಫಿಡೆವಿಟ್) ಮತ್ತು ಮುಚ್ಚಳಿಕೆ ಪ್ರಮಾಣ ಪತ್ರ (ಎರಡಕ್ಕೂ ನೋಟರಿಯವರ ಸಹಿ ಇರಬೇಕು). | | ನೋಟರಿ ಪ್ರಮಾಣ ಪತ್ರ (ಅಫಿಡೆವಿಟ್) ಮುಚ್ಚಳಿಕೆ ಪ್ರಮಾಣ ಪತ್ರಗಳನ್ನು ಸಲ್ಲಿಸಿರುತ್ತಾರೆ. | |
| 13 | ಫೋರ್‌ಮನ್ ನೇಮಕದ ಬಗ್ಗೆ | | ಫೋರಮನ್ ನೇಮಕ ಮಾಡಿಕೊಂಡಿರುವ ಬಗ್ಗೆ ನಡವಳಿ ಸಲ್ಲಿಸಿರುತ್ತಾರೆ. | |

ಸಂಸ್ಥೆ ಸಲ್ಲಿಸಿರುವ ದಾಖಲಾತಿಗಳು ಹಾಗೂ ಶಾಖಾ ಸಹಕಾರ ಸಂಘಗಳ ಉಪ ನಿಬಂಧಕರ ವರದಿ ಆಧರಿಸಿ, ಚೀಟಿ ಅಧಿನಿಯಮ 1982 ರ ಪ್ರಕರಣ 19(1) ಪ್ರಕಾರ ಚೀಟಿ ವ್ಯವಹಾರ ಪ್ರಾರಂಭಿಸಲು ಷರತ್ತುಬದ್ಧ ಅನುಮತಿ ನೀಡುವ ಕುರಿತು ಈ ಕೆಳಕಂಡ ಆದೇಶ.

## ಆದೇಶ

ಚೀಟಿ ನಿಧಿ ಅಧಿನಿಯಮ 1982 ರ ಪ್ರಕರಣ 19(1) ರ ಪ್ರಕಾರ ದತ್ತವಾದ ಅಧಿಕಾರವನ್ನು ಚಲಾಯಿಸಿ, ಹಿಶಿತಾ ಅಂಡ್ ಗಜನ್ ಚಿಟ್ ಫಂಡ್ಸ್ ಪ್ರೈವೇಟ್ ಲಿಮಿಟೆಡ್., ನಂ. 79, 2ನೇ ಮಹಡಿ, 18ನೇ ಕ್ರಾಸ್, ವೆಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055. ಈ ಸಂಸ್ಥೆಯು ಚೀಟಿ ವ್ಯವಹಾರ ಪ್ರಾರಂಭಿಸಲು ಇದರ ಫೋರ್‌ಮನ್ ಇವರಿಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮತಿ ನೀಡಿದೆ.

**"ಷರತ್ತುಗಳು"**

1. ಚೀಟಿ ನಿಧಿಗಳ ಕಾಯ್ದೆ 1982ರ ಕಲಂ 19(1) ರ ಈ ಅನುಮತಿಯು ಚೀಟಿ ವ್ಯವಹಾರ ಪ್ರಾರಂಭಿಸಲು ಮಾತ್ರ ಸೀಮಿತವಾಗಿದ್ದು, ಚೀಟಿ ಗುಂಪು ರಚನೆಗೆ ಚೀಟಿ ಗುಂಪು ಮೊತ್ತಕ್ಕೆ ಅನುಗುಣವಾಗಿ

ಕಾರ್ಯವ್ಯಾಪ್ತಿ ಸಹಕಾರ ಸಂಘಗಳ ಉಪನಿಬಂಧಕರು/ಸಹಕಾರ ಸಂಘಗಳ ಸಹಾಯಕ ನಿಬಂಧಕರವರಿಂದ ಅನುಮತಿ ಪಡೆದು ಚೀಟಿ ಗುಂಪು ಪ್ರಾರಂಭಿಸಬೇಕಾಗಿರುತ್ತದೆ.

2. ಈ ಸಂಸ್ಥೆಯು ಚೀಟಿ ನಿಧಿ ಅಧಿನಿಯಮ 1982 ಹಾಗೂ ನಿಯಮಗಳು 1983 ರನ್ವಯ ಚೀಟಿ ವ್ಯವಹಾರವನ್ನು ಮಾತ್ರ ನಡೆಸುವುದು. ಚೀಟಿ ನಿಧಿ ಕಾಯ್ದೆ 1982 ರ ಪ್ರಕರಣ (3)ಕ್ಕೆ ಪೂರಕವಾಗುವಂತೆ ಕಂಪನಿಯು ಮೆಮೋರಂಡಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನಲ್ಲಿ ಪೂರ್ವಾನುಮತಿ ಇಲ್ಲದೇ ಬದಲಾವಣೆ ಮಾಡತಕ್ಕದ್ದಲ್ಲ.

3. ಚೀಟಿ ನಿಧಿ ಕಾಯ್ದೆ ನಿಯಮ ಉಲ್ಲಂಘನೆಯಾಗಿರುವುದಿಲ್ಲವೆಂಬ ಮಾಹಿತಿಯನ್ನು ಪ್ರತಿ ಚೀಟಿ ಗುಂಪು ಪ್ರಾರಂಭಿಸುವಾಗ ಮತ್ತುಕೊನೆಯಲ್ಲಿ ಭಧ್ರತಾ ಠೇವಣಿ ಬಿಡುಗಡೆ ಸಂದರ್ಭದಲ್ಲಿ ಸಂಬಂಧಿತ ಪ್ರಾಧಿಕಾರಕ್ಕೆ ನೀಡತಕ್ಕದ್ದು.

4. ಸದರಿ ಸಂಸ್ಥೆಯು ಚೀಟಿ ನಿಧಿ ಅಧಿನಿಯಮ 1982 ರ ಪ್ರಕರಣ 4(1)ರ ಪ್ರಕಾರ ಚೀಟಿ ಗುಂಪುಗಳಿಗೆ ಪೂರ್ವ ಮಂಜೂರಾತಿ ಹಾಗೂ ಪ್ರಕರಣ 9(2)ರಂತೆ ಪ್ರಾರಂಭಿಕ ದೃಢೀಕರಣ ಪತ್ರಗಳನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ವ್ಯವಹರಿಸತಕ್ಕದ್ದು.

5. ಚೀಟಿ ನಿಧಿ ಅಧಿನಿಯಮ 1982 ಪ್ರಕರಣ 12ರ ಪ್ರಕಾರಚೀಟಿ ವ್ಯವಹಾರವನ್ನು ಹೊರತುಪಡಿಸಿ ಇತರೆ ವ್ಯವಹಾರವನ್ನು ನಡೆಸತಕ್ಕದ್ದಲ್ಲ. ಇದನ್ನು ಉಲ್ಲಂಘಿಸಿದ್ದಲ್ಲಿ ಈ ಆದೇಶವನ್ನು ರದ್ದುಗೊಳಿಸಲಾಗುವುದು.

6. ಈ ಅನುಮತಿ ಆದೇಶಕ್ಕೆ ಲಗತ್ತಿಸಿರುವ ನಮೂನೆ-1 ರ ಮಾಹಿತಿಯನ್ನು ಈ ಅನುಮತಿ ಹೊರಡಿಸಿದ ಒಂದು ತಿಂಗಳೊಳಗಾಗಿ ಉಳಿತಾಯ ಖಾತೆ ಸಂಖ್ಯೆ ಒಳಗೊಂಡಂತೆ ಈ ಕಛೇರಿಗೆ ಸಲ್ಲಿಸತಕ್ಕದ್ದು ಮತ್ತು ಅದರಲ್ಲಿ ಕಾಲಕಾಲಕ್ಕೆ ಆಗುವ ಬದಲಾವಣೆಗಳನ್ನು, ಬದಲಾವಣೆಗೊಂಡ 2 ತಿಂಗಳೊಳಗೆ ಈ ಕಛೇರಿಗೆ ವರದಿ ಮಾಡತಕ್ಕದ್ದು, ತಪ್ಪಿದಲ್ಲಿ ಈ ಅನುಮತಿಯು ಸ್ವಯಂಚಾಲಿತವಾಗಿ ರದ್ದಾಗುವುದೆಂದು ತಿಳಿಯತಕ್ಕದ್ದು.

7. ನಿಬಂಧಕರು ಕಾಲ ಕಾಲಕ್ಕೆ ಹೊರಡಿಸುವ ನಿರ್ದೇಶನ/ಮಾರ್ಗಸೂಚಿ ಹಾಗೂ ಚೀಟಿ ನಿಧಿ ಅಧಿನಿಯಮ 1982 ಮತ್ತು ನಿಯಮಾವಳಿ 1983 ಕ್ಕೆ ತಿದ್ದುಪಡಿಯಾದ 3 ತಿಂಗಳೊಳಗಾಗಿ ಕಂಪನಿ ಅಳವಡಿಸಿಕೊಳ್ಳಲು ಬದ್ಧವಾಗಿರತಕ್ಕದ್ದು, ತಪ್ಪಿದಲ್ಲಿ ನೀಡಲಾದ ಅನುಮತಿಯನ್ನು ಯಾವುದೇ ಸಮಯದಲ್ಲಿ ರದ್ದು ಪಡಿಸಲಾಗುವುದೆಂದು ತಿಳಿಯತಕ್ಕದ್ದು.

8. ಈ ಅನುಮತಿ ಆದೇಶದ ದಿನಾಂಕದಿಂದ ಆರು ತಿಂಗಳೊಳಗೆ ಸಂಸ್ಥೆಯು ಚೀಟಿ ವ್ಯವಹಾರವನ್ನು ಕೈಗೊಳ್ಳದಿದ್ದಲ್ಲಿ ಕಲಂ 19(1) ರ ಅನುಮತಿಯು ಸ್ವಯಂಚಾಲಿತವಾಗಿ ರದ್ದಾಗುತ್ತದೆ.

9. ಚೀಟಿ ನಿಧಿಗಳ ಕಾಯ್ದೆ ಕಲಂ 13ರ ಅವಕಾಶದಲ್ಲಿ ತಿಳಿಸಿರುವ ಚೀಟಿಯ ಒಟ್ಟಾರೆ ಮೊತ್ತ (Agreegate chit amount) ವನ್ನು ಮೀರದಂತೆ ಸಂಸ್ಥೆಯು ಚೀಟಿ ವ್ಯವಹಾರವನ್ನು ನಡೆಸತಕ್ಕದ್ದು. ಒಂದು ವೇಳೆ ಈ ಅವಕಾಶವು ಉಲ್ಲಂಘನೆಯಾದಲ್ಲಿ ಸಂಸ್ಥೆಯ ಸಂಬಂಧಪಟ್ಟವರೆಲ್ಲರನ್ನೂ ಕಾನೂನು ಕ್ರಮಕ್ಕೆ ಒಳಪಡಿಸಲಾಗುವುದು.

10. ಚೀಟಿ ನಿಧಿಗಳ ಕಾಯ್ದೆ 1982 ಕಲಂ 21ರ ಅವಕಾಶದಲ್ಲಿ ತಿಳಿಸಿರುವ ಸೋಡಿ ಪ್ರಮಾಣಕ್ಕಿಂತ ಹೆಚ್ಚಿನ ಮೊತ್ತದ ಸೋಡಿಯನ್ನು ಪಡೆದಲ್ಲಿ ಫೋರ್‌ಮನ್ ಮತ್ತು ಸಂಸ್ಥೆಯ ಎಲ್ಲಾ ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು.

11. ಸಂಸ್ಥೆಯು ಚೀಟಿ ಕುರಿತಂತೆಯಾವುದೇ ಠೇವಣಿಯನ್ನು ಸಂಗ್ರಹಿಸುವಂತಿಲ್ಲ.

12. ಕಾರ್ಯವ್ಯಾಪ್ತಿ ನಿಬಂಧಕರು ಪ್ರತಿಚೀಟಿ ಗುಂಪುಗಳ ಭದ್ರತೆ ಮತ್ತು ಗುಂಪು ಕಾಲಾವಧಿ ಮುಗಿದ ನಂತರ ಭದ್ರತಾ ಮೊತ್ತ ವಾಪಸ್ಸು ಮಾಡುವಲ್ಲಿ ಕಾಯ್ದೆ ಮತ್ತು ನಿಯಮಗಳ ಅವಕಾಶ ಪಾಲನೆಯಾಗಿರುವುದು ಹಾಗೂ ಯಾವುದೇ ಚೀಟಿದಾರರಿಗೆ ಚೀಟಿ ಮೊತ್ತ ಬಾಕಿ ಇಲ್ಲದಿರುವುದನ್ನು ಖಾತರಿಪಡಿಸಿಕೊಂಡು ಭದ್ರತಾ ಠೇವಣಿ ಮೊತ್ತವನ್ನು ಬಿಡುಗಡೆ ಮಾಡುವುದು. ತಪ್ಪಿದಲ್ಲಿ ಕಾರ್ಯವ್ಯಾಪ್ತಿ ನಿಬಂಧಕರು ವೈಯುಕ್ತಿಕವಾಗಿ ಜವಾಬ್ದಾರರಾಗಿರುತ್ತಾರೆ.

13. ಕಾರ್ಯವ್ಯಾಪ್ತಿ ಸಹಾಯಕ ನಿಬಂಧಕರು/ಉಪ ನಿಬಂಧಕರು ತಮ್ಮ ವ್ಯಾಪ್ತಿಯಲ್ಲಿನ ಚೀಟಿ ಸಂಸ್ಥೆಯ ವ್ಯವಹಾರಗಳನ್ನು ಕಾಲಕಾಲಕ್ಕೆ ಪರಿವೀಕ್ಷಣೆ ಮಾಡತಕ್ಕದ್ದು.

14. ಚೀಟಿ ನಿಧಿಗಳ ಕಾಯ್ದೆ ಮತ್ತು ನಿಯಮಗಳ ಅವಕಾಶಗಳನ್ವಯ ಕಾಲಕಾಲಕ್ಕೆ ಸಲ್ಲಿಸಬೇಕಾದಂತಹ/ವರದಿಗಳು/ದಾಖಲೆ/ಮಾಹಿತಿ/ನಡವಳಿಗಳನ್ನು ಸಂಸ್ಥೆಯ ಫೋರ್‌ಮನ್, ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಪಾಲುದಾರು/ನಿರ್ದೇಶಕರುಗಳೇ ಜವಾಬ್ದಾರಿ ಹೊಂದಿರುತ್ತಾರೆ.

15. ಚೀಟಿ ನಿಧಿಗಳ ಕಾಯ್ದೆ 1982 ಮತ್ತು ಚೀಟಿ ನಿಧಿಗಳ ನಿಯಮಗಳು 1983ರ ಎಲ್ಲಾ ಅವಕಾಶಗಳನ್ನು ಸಂಸ್ಥೆಯು ಚಾಚೂ ತಪ್ಪದೆ ಪಾಲಿಸತಕ್ಕದ್ದು.

ಈ ಆದೇಶವನ್ನು ನನ್ನ ಸಹಿ ಮತ್ತು ಕಛೇರಿ ಮುದ್ರೆಯೊಂದಿಗೆ ದಿ:20-01-2025 ರಂದು ಹೊರಡಿಸಿದೆ.

{ಮಾನ್ಯ ಸ.ಸಂ.ನಿಬಂಧಕರು ಹಾಗೂ ಚೀಟಿ
ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು.
ಇವರಿಂದ ಅನುಮೋದಿಸಲ್ಪಟ್ಟಿದೆ}

(ಕಲ್ಲಪ್ಪ ಒಬಣ್ಣಗೋಳ್)
ಸಹಕಾರ ಸಂಘಗಳ ಜಂಟಿ ನಿಬಂಧಕರು
ಕಾನೂನು ಕೋಶ, ಕೇಂದ್ರ ಕಛೇರಿ.

ಗೆ,
ಫೋರ್‌ಮನ್,
ಹಿಶಿತಾ ಅಂಡ್ ಗಜನ್ ಚಿಟ್ ಫಂಡ್ಸ್ ಪ್ರೈವೇಟ್ ಲಿಮಿಟೆಡ್.,
ನಂ. 79, 2ನೇ ಮಹಡಿ, 18ನೇ ಕ್ರಾಸ್, ವೆಸ್ಟ್ ಪಾರ್ಕ್ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-560055.

**ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿ/ಕ್ರಮಕ್ಕಾಗಿ ರವಾನಿಸಿದೆ.:**
1.ಸಹಕಾರ ಸಂಘಗಳ ಉಪ ನಿಬಂಧಕರು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ.
2.ಸಹಕಾರ ಸಂಘಗಳ ಸಹಾಯಕ ನಿಬಂಧಕರು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ